MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - WEDNESDAY 18-5-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮೇ 1–15 ಮಲೇಶಿಯನ್ ಪಾಮೆಣ್ಣೆ ರಫ್ತು 23.9 ಶೇಕಡಾ ಹೆಚ್ಚಳ

ಮೇ 1 ರಿಂದ 15 ರ ವರೆಗೆ ಮಲೇಶ್ಯಾದಿಂದ 613,649 ಟನ್ ಪಾಮೆಣ್ಣೆ ರಫ್ತಾಗಿದೆಯೆನ್ನಲಾಗಿದ್ದು, ಇದು 23.9 ಶೇಕಡಾ ಹೆಚ್ಚಳವಾಗಿದೆ. 5 ವಾರಗಳ ಕನಿಷ್ಠ ಮಟ್ಟಕ್ಕಿಳಿದಿದ್ದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಹೆಚ್ಚಳಗೊಂಡಿದೆ. ಇಂಡೋನೇಶಿಯಾದ ರಫ್ತು ನಿರ್ಬಂಧ ನಿರೀಕ್ಷಿತ ಅವಧಿಗಿಂತ ಹೆಚ್ಚು ಮುಂದುವರಿಯುತ್ತಿರುವುದು, ದರ ಹೆಚ್ಚಳಕ್ಕೆ ಪೂರಕವಾಗಿದೆ. USDA ಅಧ್ಯಯನದಂತೆ 2021–2022 ರ ಜಾಗತಿಕ ಸಸ್ಯಜನ್ಯ ತೈಲ 212.04 ಮಿಲಿಯನ್ ಟನ್‌ಗಳಾಗಿ ಹಿಂದಿನ ವರ್ಷಕ್ಕಿಂತ 0.3 ಶೇಕಡಾ ಹೆಚ್ಚಳವಾಗಿದೆ. ಬಳಕೆ 208.92 ಮಿಲಿಯನ್ ಟನ್‌ಗಳಾಗಿ 0.1 ಶೇಕಡಾ ಇಳಿಕೆಯಾಗಿದೆ. ವರ್ಷಾಂತ್ಯದ ದಾಸ್ತಾನು 26.07 ಮಿಲಿಯನ್ ಟನ್‌ಗಳಾಗಿ 8 ಶೇಕಡಾ ಹೆಚ್ಚಳವಾಗಿದೆ.

## ದೇಶದ ಖಾದ್ಯತೈಲ ಸ್ವಾವಲಂಬನೆಗೆ ಸೋಯಾಬೀನ್ ಬೆಳೆ ವಿಸ್ತರಣೆ ಯೋಜನೆ

ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ ಖಾದ್ಯತೈಲ ಸ್ವಾವಲಂಬನೆಯ ಭಾಗವಾಗಿ ಭಾರತದಲ್ಲಿ ಸೋಯಬೀನ್ ಬೆಳೆಯ ವಿಸ್ತರಣೆ ಹಾಗೂ ಇಳುವರಿ ಹೆಚ್ಚಳಗೊಳಿಸಲು ಬ್ರೆಜಿಲ್, ಅರ್ಜೆಂಟಿನಾ ಇನ್ನಿತರ ಅಧಿಕ ಇಳುವರಿ ನಡೆಯುವ ದೇಶಗಳ ಬೆಳೆ ಅಧ್ಯಯನ ಮಾಡಿ ಅಲ್ಲಿನ ಬೆಳೆಯ ಮಾದರಿ ಅನುಸರಿಸಿ ಉತ್ಪಾದನೆ ಹೆಚ್ಚಳಗೊಳಿಸಲು ಯೋಜಿಸುತ್ತಿದೆಯೆನ್ನಲಾಗಿದೆ.

## ಬ್ರೆಜಿಲ್ ಸಕ್ಕರೆ ಉತ್ಪಾದಕರು ರಫ್ತು ರದ್ದು ಪಡಿಸಿ ಇಥೆನಾಲ್ ಉತ್ಪಾದನೆಗೆ ಆದ್ಯತೆ

ಬ್ರೆಜಿಲ್ ಸಕ್ಕರೆ ಕೈಗಾರಿಕೆಗಳು (ಮಿಲ್‌ಗಳು) ಸಕ್ಕರೆ ರಫ್ತು ವ್ಯವಹಾರ ರದ್ದು ಪಡಿಸಿ ಇಥೆನಾಲ್ ಉತ್ಪಾದನೆಯಲ್ಲಿ ಗಮನ ನೀಡುತ್ತಿದ್ದರೆನ್ನಲಾಗಿದೆ. ಇದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಸಕ್ಕರೆ ಬೇಡಿಕೆ ಹೆಚ್ಚಳಕ್ಕೆ ಸಾಧ್ಯತೆಯಿದೆ.

## ಸಸ್ಯಜನ್ಯ ತೈಲ ಆಮದು ಎಪ್ರಿಲ್ ತಿಂಗಳಲ್ಲಿ 13 ಶೇಕಡಾ ಇಳಿಕೆ, 9.12 ಲಕ್ಷ ಟನ್‌ಗಳು

ಕಚ್ಚಾ ಪಾಮೆಣ್ಣೆ ಆಮದು ಇಳಿಕೆಯಿಂದಾಗಿ ಭಾರತ ಸಸ್ಯಜನ್ಯ ತೈಲ ಆಮದು ಎಪ್ರಿಲ್ ತಿಂಗಳಲ್ಲಿ 13 ಶೇಕಡಾ ಇಳಿಕೆಯಾಗಿ, 911,846 ಟನ್‌ಗಳಾಗಿವೆ. ಎಪ್ರಿಲ್ 2021 ರಲ್ಲಿ 1053347 ಟನ್‌ಗಳಾಗಿತ್ತು. ಕಚ್ಚಾ ಪಾಮೆಣ್ಣೆ ಆಮದು 6,89,731 ಟನ್‌ಗಳಿಂದ 4,14,829 ಟನ್‌ಗಳಿಗೆ ಇಳಿಕೆಯಾಗಿವೆ. ಭಾರತ ನವೆಂಬರ್ 2021 ರಿಂದ ಎಪ್ರಿಲ್ 22 ರ ತನಕದ ಪ್ರಥಮ 6 ತಿಂಗಳ ಅವಧಿಯ ಸಸ್ಯಜನ್ಯ ತೈಲ ಆಮದು ಹಿಂದಿನ ವರ್ಷದ ಈ ಅವಧಿಯ 6428350 ಟನ್‌ಗಳಿಂದ 4 ಶೇಕಡಾ ಹೆಚ್ಚಳವಾಗಿ 67,07,574 ಟನ್‌ಗಳಿಗೆ ಇಳಿಕೆಯಾಗಿದೆ. ಸಾಫ್ಟ್ ತೈಲಗಳ ಆಮದು ಸೋಯಾಬೀನ್ ತೈಲ ಆಮದು ಹೆಚ್ಚಳದಿಂದ 2477884 ಟನ್‌ಗಳಿಂದ 33,17,242 ಟನ್‌ಗಳಿಗೆ ಹೆಚ್ಚಳವಾಗಿದೆ. ಖಾದ್ಯತೈಲ ಆಮದು 10,29,912 ಟನ್‌ಗಳಿಂದ 900085 ಟನ್‌ಗಳಿಗೆ ಇಳಿಕೆಯಾಗಿದೆ.

## ಭಾರತದ ಅಕ್ಕಿ ರಫ್ತು ದರ ರೂಪಾಯಿ ದೌರ್ಬಲ್ಯದಿಂದ ಇಳಿಕೆ

ಭಾರತದ ಅಕ್ಕಿ ರಫ್ತು ದರ ರೂಪಾಯಿ ವಿನಿಮಯ ದರ ಇಳಿಕೆಯಾದ್ದರಿಂದ ಇಳಿಕೆ ಕಂಡಿದೆ. ವ್ಯಾಪಾರ ಸ್ಥಿರವಿದ್ದು ಮುಂದೆ ಬೇಡಿಕೆ ಹೆಚ್ಚಳವಾಗಿ ರಫ್ತು ಹೆಚ್ಚಳದ ನಿರೀಕ್ಷೆಯಿದೆ.

## ದರ ಹೆಚ್ಚಳ, ಬೇಡಿಕೆ ಹೆಚ್ಚಳದಿಂದ ಜೋಳ ಬೆಳೆದವರಿಗೆ ಉತ್ತಮ ಗಳಿಕೆ

ಹಿಂದಿನೆರಡು ವರ್ಷ ಕೋವಿಡ್ ಸಂಕಷ್ಟದಿಂದ ಬೇಡಿಕೆ, ವ್ಯವಹಾರ ಇಳಿಕೆಯಿಂದ ಜೋಳ ಬೆಳೆದ ರೈತರು ನಿರಾಶರಾಗಿದ್ದರು ಹಾಗೂ ಸಾಕಷ್ಟು ಆದಾಯ ಗಳಿಕೆಯಲ್ಲಿ ಹಿನ್ನಡೆ ಅನುಭವಿಸಿದ್ದರು. ಈ ವರ್ಷ ದರ ಹೆಚ್ಚಳ ಹಾಗೂ ರಫ್ತು ಬೇಡಿಕೆ ಹೆಚ್ಚಳದಿಂದ ರೈತರ ಬೆಳೆಗೆ ಹೆಚ್ಚಿನ ಬೇಡಿಕೆ ಹಾಗೂ ದರ ದೊರೆತು ಉತ್ತಮ ಆದಾಯದ ನಿರೀಕ್ಷೆಯಲ್ಲಿದ್ದಾರೆ. ದೇಶೀ ಹಾಗೂ ರಫ್ತು ಬೇಡಿಕೆ ಉತ್ತಮವಿರುವುದರಿಂದ ದರ ಉತ್ತಮವಿದ್ದು ಬೇಡಿಕೆಯೂ ಹೆಚ್ಚಳವಿದೆ.

## ಚಿಕಾಗೋದಲ್ಲಿ ಹೊಸಬೆಳೆಯ ಸೋಯಾಬೀನ್ 64 ಶೇಕಡಾ ಹೆಚ್ಚಳ

ಯು.ಎಸ್.ಸೋಯಾಬೀನ್ ಹೊಸ ಬೆಳೆಗೆ ಉತ್ತಮ ಬೇಡಿಕೆ ಹಾಗೂ ಹೆಚ್ಚಿನ ದರ ದೊರೆತು ಬೇಡಿಕೆ 64 ಶೇಕಡಾ ಹೆಚ್ಚಳದಿಂದ 10.7 ಮಿಲಿಯನ್ ಮಾರಾಟವಾಗಿದೆಯೆನ್ನಲಾಗಿದೆ. 2023 ರಲ್ಲಿ ಉತ್ತಮ ಬೇಡಿಕೆ ಮುಂದುವರಿಯುವ ಸಾಧ್ಯತೆಯಿದೆ ಹಾಗೂ ಜಾಗತಿಕ ಪೂರೈಕೆ ಬಿಗುವಿನಿಂದ ಕೂಡಿರುವ ಸಾಧ್ಯತೆಯಿದೆ.